ಶ್ರೀ ಪಿ. ಎಂ. ನಾಡಗೌಡ.—ಮಾಡುತ್ತೇವೆ ಸ್ವಾಮಿ.

Mr. DEPUTY SPEAKER.—Next question No. 170. The member is absent.

High School Building for Girls

171. Sri V. L. SHIVAPPA (Tiptur).—

Will the Minister for Agriculture and Educaeion be pleased to state :—

(*a*) whether any estimate has been prepared and proposals submitted for the extension of the High School building for Girls at Tiptur ;

(*b*) if so, action taken in the matter ?

A.—Sri K. V. SHANKARA GOWDA (Minister for Agriculture and Education).—

(*a*) Estimates are being prepared by the Public Works Department Officers.

(*b*) Does not arise in view of reply to clause (*a*) above.

ಶ್ರೀ ವಿ. ಎಲ್. ಶಿವಪ್ಪ.—ಅಂದಾಜು ತಯಾರು ಮಾಡುವಂತೆ ಲೋಕೋಪಯೋಗಿ ಇಲಾಖೆಯನ್ನು ಸರ್ಕಾರದವರು ಯಾವಾಗ ಕೇಳಿದರು ಸ್ವಾಮಿ ?

ಶ್ರೀ ಕೆ. ವಿ. ಶಂಕರಗೌಡ.—ಅವರು ತಯಾರು ಮಾಡಬೇಕು ಎಂದು ಹೇಳಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಅಂದಾಜು ತಯಾರಾಗಿ ಬಂದಿದೆ ಎನ್ನುವ ವರ್ತಮಾನವಿದೆ. ಅಂದಾಜನ್ನು ಬೇಗ ತರಿಸಿಕೊಂಡು, ಸರ್ಕಾರದವರು ಮಂಜೂರು ಮಾಡಿ ಕಟ್ಟಡದ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಬೇಗ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವೇ ಸ್ವಾಮಿ ?

ಶ್ರೀ ಕೆ. ವಿ. ಶಂಕರಗೌಡ.— ಅಂದಾಜು ಇನ್ನೂ ಸರ್ಕಾರಕ್ಕೆ ಬಂದಿಲ್ಲ. ಈ ಮಧ್ಯೆ ಅಲ್ಲಿದ್ದ ಮುನ್‌ಸೀಫ್ ಮ್ಯಾಜಿಸ್ಟ್ರೇಟ್ ಕೋರ್ಟ್ ಕಟ್ಟಡ ಖಾಲಿಯಾಗಿದೆ. ಸ್ಕೂಲಿಗೆ ಸ್ಥಳಾಭಾವ ವಿರುವುದರಿಂದ ಆ ಕಟ್ಟಡವನ್ನು ಪಾಠಶಾಲೆಗೆ ವಹಿಸಿಕೊಡಬೇಕು ಎಂದು ಎಕ್ಸಿಕ್ಯೂಟಿವ್ ಇಂಜಿನಿಯರು ಜೂನಿಯರ್ ಇಂಜನಿಯರಿಗೆ ಸೂಚನೆಗಳನ್ನು ಕೊಟ್ಟಿದ್ದಾರೆ.

Sri G. CHANDRAKANTH.—May I know when this estimate is prepared and when the buildings would be taken up for construction ?

Sri K. V. SHANKARA GOWDA.—The estimate, I understand, is still with the Executive Engineer and it has not come to Government. After it is received, Government will think of taking further steps.

ಶ್ರೀ ಬಿ. ಪಿ. ಗಂಗಾಧರ್.—ಎಷ್ಟು ದಿವಸಗಳಲ್ಲಿ ಈ ಅಂದಾಜು ಬರುತ್ತದೆ ಮತ್ತು ಎಷ್ಟು ದಿವಸಗಳಲ್ಲಿ ಕಟ್ಟಡ ಪೂರ್ತಿಯಾಗುವುದಕ್ಕೆ ಪ್ರಯತ್ನ ಮಾಡುತ್ತೀರಿ ಸ್ವಾಮಿ ?

ಶ್ರೀ ಕೆ. ವಿ. ಶಂಕರಗೌಡ.—ಅದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಂ. ಬಸವರಾಜು.—ಹೆಣ್ಣು ಮಕ್ಕಳ ಹೈಸ್ಕೂಲುಗಳಿಗೆ ಖಾಯಂ ಆದ ಕಟ್ಟಡಗಳು ಇಲ್ಲದೆ ತುಂಬ ತೊಂದರೆಯಾಗಿರುವುದರಿಂದ ಈ ರೀತಿ ದೂರುಗಳು ಬಂದಿರುವುದರಿಂದ, ಪ್ರೌಢಶಾಲೆ ದೇಶದಲ್ಲಿ ಹೆಣ್ಣು ಮಕ್ಕಳ ಹೈಸ್ಕೂಲುಗಳಿಗೆ ಖಾಯಂ ಕಟ್ಟಡಗಳನ್ನು ಕಟ್ಟಿಸಿಕೊಡುತ್ತೀರಾ ಸ್ವಾಮಿ ?

ಶ್ರೀ ಕೆ. ವಿ. ಶಂಕರಗೌಡ.—ಸಾಧ್ಯವಾದ ಕಡೆಗಳಲ್ಲೆಲ್ಲಾ ಮಾಡುತ್ತಿದ್ದೇವೆ.

ಶ್ರೀ ಕೆ. ಎಂ. ತಮ್ಮಯ್ಯ.—ಈ ವರ್ಷ ಮುಂಜೂರಾದ ಅಂದಾಜುಗಳು ಬಂದರೂ ಅವುಗಳ ಕೆಲಸವನ್ನು ತೆಗೆದುಕೊಳ್ಳದೆ, ಈ ವರ್ಷ ಮುಂಜೂರಾಗಿರುವುದನ್ನು ಮುಂದಿನ ವರ್ಷ ತೆಗೆದು ಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ದುಡ್ಡು ಎಷ್ಟೆಷ್ಟು ಬರುತ್ತದೆ ಅದಕ್ಕೆ ಅನುಗುಣವಾಗಿ ಕೆಲಸ ಗಳನ್ನು ತೆಗೆದುಕೊಳ್ಳಲಾಗುವುದು. ಹಣವಿಲ್ಲದೆ ಇದ್ದರೆ ಮುಂದಿನ ವರ್ಷ ತೆಗೆದುಕೊಳ್ಳ ಬೇಕಾಗುತ್ತದೆ.

ಶ್ರೀ ಎಚ್. ಎನ್. ನಂಜೇಗೌಡ.—ತಿಪಟೂರಿನಲ್ಲಿ ಗರ್ಲ್ಸ್ ಹೈಸ್ಕೂಲು ಕಟ್ಟಡ ಆಗಬೇಕೆಂದು ಮನವಿ ಸರ್ಕಾರಕ್ಕೆ ಎಷ್ಟು ವರ್ಷಗಳ ಹಿಂದೆ ಬಂತು ಸ್ವಾಮಿ ?

ಶ್ರೀ ಕೆ. ವಿ. ಶಂಕರಗೌಡ.—ಮನವಿಗಳು ಬಂದಿಲ್ಲ ಎಂದು ಹೇಳಿದ್ದೇನೆ.

ಶ್ರೀ ವಿ. ಎಲ್. ಶಿವಪ್ಪ.—ಕಟ್ಟಡದ ಅವಶ್ಯಕತೆ ಬಹಳ ಇರುವ ಕಾರಣ, ಎಸ್ಟಿಮೇಟ್ ಸರ್ಕಾರಕ್ಕೆ ಮುಂಜೂರಾತಿಗೆ ಕಳಿಸಿಕೊಟ್ಟಿದ್ದಾರೆಂದು ತಿಳಿದುಬಂದಿರುವುದರಿಂದ, ಬೇಗ ಅಂದಾಜನ್ನು ಮುಂಜೂರುಮಾಡಿ ಕೆಲಸ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ಸ್ವಾಮಿ ?

ಶ್ರೀ ಕೆ. ವಿ. ಶಂಕರಗೌಡ.—ಅಂದಾಜು ಇನ್ನೂ ಸರ್ಕಾರಕ್ಕೆ ಬಂದಿಲ್ಲ. ಅಂದಾಜು ಮತ್ತು, ಪ್ಲಾನ್ ಬಂದಮೇಲೆ, ಸರ್ಕಾರದ ಹತ್ತಿರ ಹಣವಿದ್ದರೆ ಅದಕ್ಕನುಗುಣವಾಗಿ ಕೆಲಸ ತೆಗೆದು ಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಬಸವರಾಜು.—ಹಣದ ಅವಶ್ಯಕತೆ ಹೇಗೆ ಒದಗುತ್ತದೆಯೋ ಹಾಗೆ ಕಟ್ಟಡದ ಕೆಲಸ ತೆಗೆದುಕೊಳ್ಳುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ಕೆಲಸಗಳನ್ನು ತೆಗೆದು ಕೊಳ್ಳುವಾಗ ಜಿಲ್ಲಾವಾರು ಪ್ರಾತಿನಿಧ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ತೆಗೆದುಕೊಳ್ಳುತ್ತೀರಾ ಸ್ವಾಮಿ ?

ಶ್ರೀ ಕೆ. ವಿ. ಶಂಕರಗೌಡ.—ಜಿಲ್ಲಾವಾರು ಪ್ರಾತಿನಿಧ್ಯ, ಮತ್ತು ಸ್ಥಳದ ವಿದ್ಯಮಾನ ಎಲ್ಲವನ್ನೂ ನೋಡುತ್ತೇವೆ. ಕಟ್ಟಡವಿಲ್ಲದೆ ಎಷ್ಟೆಷ್ಟು ಕಷ್ಟವಿದೆ ಎನ್ನುವುದನ್ನೂ ನೋಡುತ್ತೇವೆ. ಎಲ್ಲ ವಿಷಯಗಳನ್ನೂ ಪರಿಶೀಲನೆ ಮಾಡಿ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಗಂಗಣ್ಣ.—ಮುನ್ಸಿಫ್ ಕೋರ್ಟ್ ಕಟ್ಟಡದಲ್ಲಿ ಈಗ ಶಾಲೆಯೆನ್ನು ನಡೆಸಲಾಗುತ್ತಿದೆ ಎಂದು ಹೇಳಿದರು. ಅದನ್ನೇ ಖಾಯಂ ಆಗಿ ಏಕೆ ಕೊಡಬಾರದು ?

ಶ್ರೀ ಕೆ. ವಿ. ಶಂಕರಗೌಡ.—ಒಳ್ಳೆಯ ಸಲಹೆ, ಅನುಕೂಲವಾದರೆ ಮಾಡಬಹುದು.

Sri J. P. SARWESH.—Will the Government assure that it will issue a circular stating that an estimate should be completed within a limited time ?

Sri K. V. SHANKARA GOWDA.—No circular can be issued. Depending upon local conditions, plans and estimates will be prepared.

ಶ್ರೀ ನದಾಶಿವಪ್ಪ ಪಾಟೀಲ್.—ಕಟ್ಟಡದ ಸಂಬಂಧದಲ್ಲಿ ವಿದ್ಯಾ ಇಲಾಖೆಗೆ ಬರೆದರೆ ನಮಗೆ ಸಂಬಂಧವಿಲ್ಲ ಎಂದು ಹೇಳುತ್ತಾರೆ, ಲೋಕೋಪಯೋಗಿ ಇಲಾಖೆಗೆ ಬರೆದರೆ ನಮಗೆ ಸಂಬಂಧವಿಲ್ಲ ಎನ್ನುತ್ತಾರೆ, ದೇವದುರ್ಗದಲ್ಲಿ ಒಂದು ಬಾಲಕಿಯರ ಶಾಲೆ ಇದೆ. ಇದನ್ನು ಸ್ವಲ್ಪ ಯೋಚನೆ ಮಾಡುತ್ತೀರಾ ?

Sri K. V. SHANKARA GOWDA.—Notice, Sir.

ಶ್ರೀ ಎ. ಆರ್. ಬದರೀನಾರಾಯಣ್.—ಈ ಸಂಬಂಧದಲ್ಲಿ ಹಣ ಕೊಡುವಾಗ ಯಾವ ನೀತಿ, ತತ್ವ ಅನುಸರಿಸಲಾಗುವುದು ? ಹಣ ಕೊಡುವಾಗ ಪ್ರಾಶಸ್ತ್ಯ ಹೇಗೆ ಕೊಡುತ್ತೀರಿ ?

ಶ್ರೀ ಕೆ. ವಿ. ಶಂಕರಗೌಡ.—ಯಾವ ಶಾಲೆಯಲ್ಲಿ ಸ್ಥಳಾವಕಾಶವಿಲ್ಲ, ಯಾವುದಕ್ಕೆ ಕಟ್ಟಡವಿಲ್ಲ ಎಂಬುದನ್ನು ನೋಡಿ ಪ್ರಾಶಸ್ತ್ಯ ಕೊಡಲಾಗುವುದು.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಕಟ್ಟಡಕ್ಕೆ ಸರಕಾರ, ಮುನಿಸಿಪಾಲಿಟಿ ಇಷ್ಟೆಷ್ಟು ಕೊಡಬೇಕು ಎಂದೇನಾದರೂ ನೀತಿಯಿದೆಯೋ ಅಥವಾ ಸರಕಾರವೇ ಸಂಪೂರ್ಣವಾಗಿ ಹಣ ಒದಗಿಸುವುದೋ ?

ಶ್ರೀ ಕೆ. ವಿ. ಶಂಕರಗೌಡ.—ಹೈಸ್ಕೂಲಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಸರಕಾರ ಹಣ ಕೊಡಬೇಕಂದೇನೂ ಇಲ್ಲ. ಸಾಧ್ಯವಾದರೆ ಕೊಡಬಹುದು. ಪ್ರೈಮರಿ ಶಾಲೆಗಳಿಗೆ ತಾಲ್ಲೂಕು ಬೋರ್ಡ್ ಮತ್ತು ಸ್ಥಳದವರೂ ಸೇರಿ ಸಹಾಯ ಮಾಡಬೇಕು. ಸರಕಾರ ಒಂದು ಸಾವಿರ ರೂಪಾಯಿ ಕೊಡುವುದು, ತಾಲ್ಲೂಕು ಬೋರ್ಡಿನವರು ಅರ್ಧ, ಸ್ಥಳದವರು ಅರ್ಧ ಕೊಡಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮುನ್ಸೀಫ್ ಕೋರ್ಟ್ ಕಟ್ಟಡ ಬಿಡಿಸಿಕೊಟ್ಟರೆ ಹೆಣ್ಣು ಮಕ್ಕಳ ಶಾಲೆಗೆ ಅಲ್ಲೇನೋ ಅನುಕೂಲವಾಗಿದ್ದರೂ ಶಾಲೆಗೆ ಬೇಕಾದ ಕಟ್ಟಡ ಸೌಲಭ್ಯ ಸಿಕ್ಕುವುದಿಲ್ಲವೆಂದು ಯೋಚನೆ ಮಾಡಿದ್ದೀರಾ ?

ಶ್ರೀ ಕೆ. ವಿ. ಶಂಕರಗೌಡ.—ಅದು ಸಾಲದಿರಬಹುದು. ತಾತ್ಕಾಲಿಕವಾಗಿ ಪರಿಹಾರ ನೀಡಲು ಹಾಗೇನಾದರೂ ಮಾಡಬೇಕಾಗುವುದು.

Facilities in the existing General Hostels

172. Sri P. ANJANAPPA (Pavagada).—

Will the Minister for Agriculture and Education be pleased to state :—

(*a*) whether they would provide facilities such as books, clothes, boarding and lodging, etc., in the existing general hostels in the State, free of cost for the students of Nursery to High School ;

(*b*) whether they propose to increase the present strength of the hostels ?

A.—Sri K. V. SHANKARA GOWDA (Minister for Agriculture and Education).—

(*a*) No.

(*b*) There is no limit for admission to General Hostels.

ಶ್ರೀ ಪಿ. ಆಂಜನಪ್ಪ.—ಈಗ ತುಮಕೂರು ಸರಕಾರಿ ಕಾಲೇಜಿನ ಹಾಸ್ಟಲಿನಲ್ಲಿ ಈ ತೀರಗಳು ಅಂದರೆ, ಮಾರ್ಚ್ ಒಂದನೆಯ ತಾರೀಖಿನಿಂದ ಊಟ ಕೊಡುವುದನ್ನು ನಿಲ್ಲಿಸಿರುವುದರಿಂದ ಈಗ ಪರೀಕ್ಷೆಯ ಕಾಲವಾದ್ದರಿಂದ ದಯೆಯಿಟ್ಟು ಊಟಕ್ಕೆ ಅವಕಾಶ ಮಾಡುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ಜನರಲ್ ಹಾಸ್ಟಲುಗಳಲ್ಲಿ ಊಟ ನಿಲ್ಲಿಸಿದರೆ ಸರಕಾರವೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ರಾಜ್ಯದಲ್ಲಿರುವ ನಿಮ್ನವರ್ಗದ ವಿದ್ಯಾರ್ಥಿಗಳಿಗಾದರೂ ಉಚಿತವಾಗಿ ಪುಸ್ತಕ, ಬಟ್ಟೆ, ಊಟ, ವಸತಿ ಮುಂತಾದುವುಗಳನ್ನು ಒದಗಿಸಿದ್ದೀರಾ ? ಇಲ್ಲದಿದ್ದರೆ ಮುಂದಾದರೂ ಒದಗಿಸುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ನಿಮ್ನವರ್ಗದ ಹಾಸ್ಟಲುಗಳಿಗೆ ಸಹಾಯ ಧನವಿದೆ. ಇದು ಜನರಲ್ ಹಾಸ್ಟಲಿನ ವಿಚಾರ. ತಾವು ಕೇಳಿರುವ ಉತ್ತರ ಬೇಕಾದರೆ ಬೇರೆ ಪ್ರಶ್ನೆ ಕೇಳಿ.

ಶ್ರೀ ಎಸ್. ಎಸ್. ಅರಕೇರಿ.—ಜನರಲ್ ಹಾಸ್ಟೆಲುಗಳಿಗೆ ಸರ್ಕಾರದಿಂದ ಏನಾದರೂ ಧನ ಸಹಾಯ ಇದೆಯೇ ! ಇದ್ದರೆ ಎಷ್ಟು ಪರ್ಸೆಂಟು ?

ಶ್ರೀ ಕೆ. ವಿ. ಶಂಕರಗೌಡ.—ಅಲ್ಲಿ ನೌಕರರು ಏನಿರುತ್ತಾರೋ ಅವರ ಸಂಬಳ ಎಷ್ಟಿದೆ ಅದನ್ನು ಕೊಡಲಾಗುತ್ತದೆ.